## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ನೂತನವಾಗಿ ಸೃಜಿಸಲಾಗಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವೃತ್ತ ಹಾಗೂ ವಿಭಾಗ ಕಛೇರಿಗಳ ನವೀಕರಣ ಕಾಮಗಾರಿಗಳಿಗೆ 2014-15ನೇ ಸಾಲಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂ.ಗ್ರಾಅಪ/56/ಗ್ರಾನೀಸ(2)2013, ದಿನಾಂಕ:04.3.2014

2) 2014-15ನೇ ಸಾಲಿನಲ್ಲಿ ಆಯವ್ಯಯದಡಿ ಒದಗಿಸಿರುವ ಅನುದಾನ.

3) ಸರ್ಕಾರದ ಆದೇಶ ಸಂ.ಗ್ರಾಕುನೀ/38/ನೈಇ/2014, ದಿನಾಂಕ: 18.10.2014.

**ಪೀಠಿಕೆ:**

ಮೇಲೆ ಓದಲಾದ (1) ರ ಆದೇಶದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯನ್ನು ಹೊಸದಾಗಿ ಸೃಜಿಸಲಾಗಿದ್ದು, ಅವುಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಮೇಲೆ ಓದಲಾದ (2)ರ ಪ್ರಕಾರ 2014-15ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸ್ಥಾಪನೆಗಾಗಿ ಲೆಕ್ಕಶೀರ್ಷಿಕೆ "2215-01-001-1-03" ಅಡಿ **ರೂ.200.00ಲಕ್ಷ** ಅನುದಾನವನ್ನು ಒದಗಿಸಲಾಗಿದೆ. ಅಲ್ಲದೆ ಓದಲಾದ (3)ರ ಆದೇಶದಲ್ಲಿ ಸದರಿ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಅನುದಾನವನ್ನು ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರಿಗೆ ಖಜಾನೆಯಿಂದ ಸೆಳೆಯಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ. ಪ್ರಸ್ತುತ ಬೆಂಗಳೂರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ ಕಛೇರಿ ವ್ಯಾಪ್ತಿಯ, ವೃತ್ತ ಕಛೇರಿ ಹಾಗೂ ವಿಭಾಗ ಕಛೇರಿಗಳ ನವೀಕರಣ ಕಾಮಗಾರಿಯ ಸಲುವಾಗಿ **ರೂ.13.40ಲಕ್ಷ** ಅಂದಾಜು ಪಟ್ಟಿಗೆ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡಬೇಕೆಂದು ಕೋರಿ ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ವೃತ್ತ ಕಛೇರಿ ಬೆಂಗಳೂರುರವರು ಓದಲಾದ (4)ರ ಪ್ರಸ್ತಾವನೆಯಂತೆ ಸರ್ಕಾರವನ್ನು ವಿನಂತಿಸಿದ್ದಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಹೊಸ ಇಲಾಖೆಯಡಿ ಸೃಜಿಸಲಾಗಿರುವ ವೃತ್ತ ಕಛೇರಿ ಹಾಗೂ ವಿಭಾಗ ಕಛೇರಿಗಳ ನವೀಕರಣಕ್ಕಾಗಿ **ರೂ.13.40ಲಕ್ಷ** ಅನುದಾನ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಆದೇಶ

### ಸರ್ಕಾರದ ಆದೇಶ ಸಂ.ಗ್ರಾಅಪ/35/ಗ್ರಾನೀಸ(2)2015, ದಿನಾಂಕ:25.03.2015

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಹೊಸದಾಗಿ ಸೃಜಿಸಲಾಗಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ವೃತ್ತ ಕಛೇರಿ ಹಾಗೂ ವಿಭಾಗ ಕಛೇರಿಗಳ ನವೀಕರಣಕ್ಕಾಗಿ **ರೂ.13.40ಲಕ್ಷ** ಅಂದಾಜಿನ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, **ರೂ.13.40ಲಕ್ಷ (ಹದಿಮೂರು ಲಕ್ಷ ನಲವತ್ತು ಸಾವಿರ ರೂಪಾಯಿಗಳು ಮಾತ್ರ)**ಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ಕಾಮಗಾರಿಯ ವಿವರ | ಅಂದಾಜು ಮೊತ್ತ |
|---|---|---|
| 1 | ಬೆಂಗಳೂರು ವೃತ್ತ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ & ನೈ.ಇಲಾಖೆ ರವರ ಕಛೇರಿ ನವೀಕರಣ ಕಾಮಗಾರಿ (ಕಾರ್ಯಪಾಲಕ ಅಭಿಯಂತರವರ ಛೇಂಬರ್‌ಗೆ ಅಲ್ಯೂಮಿನಿಯಂ ವಿಭಾಗೀಯಗಳನ್ನು ಒದಗಿಸುವುದು) | 2,50,000.00 |
| 2 | ಬೆಂಗಳೂರು ವೃತ್ತ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ & ನೈ.ಇಲಾಖೆ ರವರ ಕಛೇರಿ ನವೀಕರಣ ಕಾಮಗಾರಿ (ಬೋರ್ಡ ರೂಂ. ಟೈಪಿಸ್ಟ್ ಡಿಸ್ಕಷನ್ ರೂಂಗಳಿಗೆ ಅಲ್ಯೂಮಿನಿಯಂ ವಿಭಾಗೀಯಗಳನ್ನು ಒದಗಿಸುವುದು) | 2,50,000.00 |
| 3 | ಬೆಂಗಳೂರು ವೃತ್ತ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ & ನೈ.ಇಲಾಖೆ ರವರ ಕಛೇರಿ ನವೀಕರಣ ಕಾಮಗಾರಿ (ಲಂಬ ವಿಭಾಗೀಯಗಳೂ ಮತ್ತು ಕಾರ್ಯಪಾಲಕ ಅಭಿಯಂತರವರ ಛೇಂಬರ್‌ಗೆ ಅಲ್ಯೂಮಿನಿಯಂ ವಿಭಾಗೀಯಗಳನ್ನು ಒದಗಿಸುವುದು) | 2,50,000.00 |
| 4 | ಬೆಂಗಳೂರು ವೃತ್ತ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ & ನೈ.ಇಲಾಖೆ ರವರ ಕಛೇರಿ ನವೀಕರಣ ಕಾಮಗಾರಿ (ಅಧೀಕ್ಷಕ ಅಭಿಯಂತರವರ ಛೇಂಬರ್‌ಗೆ ಅಲ್ಯೂಮಿನಿಯಂ ವಿಭಾಗೀಯಗಳನ್ನು ಒದಗಿಸುವುದು) | 2,40,000.00 |
| 5 | ಬೆಂಗಳೂರು ವೃತ್ತ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ & ನೈ.ಇಲಾಖೆ ರವರ ಕಛೇರಿ ನವೀಕರಣ ಕಾಮಗಾರಿ (ಅಧೀಕ್ಷಕ ಅಭಿಯಂತರವರ ಕಛೇರಿಯಲ್ಲಿನ ಹಳೆಯ ಅಲ್ಯೂಮಿನಿಯಂ ವಿಭಾಗ್ರೀಯಗ್ಗಳನ್ನು ಒದಗಿಸುವುದು) | 2,15,000.00 |

| | | |
|---|---|---|
| 6 | ಬೆಂಗಳೂರು ವೃತ್ತ ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ & ನೈ.ಇಲಾಖೆ ರವರ ಕಛೇರಿ ನವೀಕರಣ ಕಾಮಗಾರಿ (ಕಾರ್ಯಪಾಲಕ ಅಭಿಯಂತರವರ ಕಛೇರಿಯಲ್ಲಿನ ಹಳೆಯ ಅಲ್ಯೂಮಿನಿಯಂ ವಿಭಾಗೀಯಗಳನ್ನು ತೆಗೆದು ಹಾಕಿ ಹೊಸತನ್ನು ಒದಗಿಸುವುದು ಮತ್ತು ಸುಣ್ಣ ಬಣ್ಣದ ಕೆಲಸ) | 1,35,000.00 |
| | **ಒಟ್ಟು** | **13,40,000.00** |

2) ಸದರಿ ಬಿಡುಗಡೆ ಮಾಡಲಾದ ಅನುದಾನವನ್ನು ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ ವೃತ್ತ ಕಛೇರಿ ಬೆಂಗಳೂರು ಹಾಗೂ ಕಾರ್ಯಪಾಲಕ ಅಭಿಯಂತರ (RDWSD) ಕಛೇರಿಗೆ ಅಲ್ಯೂಮಿನಿಯಂ ವಿಭಾಗೀಯಗಳನ್ನು (Aluminium Partition) ನಿಯಮಾನುಸಾರ ಖರೀದಿಸಿ ವೆಚ್ಚ ಭರಿಸಲು ಕ್ರಮವಹಿಸಬಹುದಾಗಿದೆ.

3) ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಈ ಆದೇಶದನ್ವಯ ಬಿಡುಗಡೆ ಮಾಡಿದ ಅನುದಾನವನ್ನು ಖಜಾನೆಯಿಂದ ಪಡೆದ ಬಗ್ಗೆ ಖಜಾನೆ ವೋಚರ್ ಸಂಖ್ಯೆ ಮತ್ತು ದಿನಾಂಕವನ್ನು CE/RDWSD ಹಾಗೂ ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ಇವರಿಗೆ ಸಲ್ಲಿಸಲು ಸೂಚಿಸಲಾಗಿದೆ.

4) ಸದರಿ ಅನುದಾನದವನ್ನು ಲೆಕ್ಕ ಶೀರ್ಷಿಕೆ "2215-01-001-1-03" ರಡಿ ಸೆಳೆದು ವೆಚ್ಚ ಭರಿಸುವುದು.

ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು, ಟಿಪ್ಪಣಿ ಸಂಖ್ಯೆ:ಗ್ರಾಅಪ 186 ಪಿಬಿಎಸ್ 2015, ದಿ:11.03.2015ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/3/15

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾ. ಅ. & ಪಂ. ರಾಜ್ ಇಲಾಖೆ
ಇಮೇಲ್:rk3452000@gmail.com
ಫೋನ್:22240508 ಫ್ಯಾಕ್ಸ್:22233175

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು(ಎಯು-1)ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ ಬೆಂ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ವಿಶೇಷಾಧಿಕಾರಿಗಳು (ಜಿಪಂ)ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು,ಆರ್ಥಿಕ ಇಲಾಖೆ, ವಿಧಾನಸೌಧ ಬೆಂ.
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
11. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು.-09.
12. ಆಯುಕ್ತರು, ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ / ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ, ಇವರುಗಳ ಆಪ್ತ ಸಹಾಯಕರು.
13. ನಿರ್ದೇಶಕರು, E-Governance, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಮ್ಯಾನೇಜರ್, ಕಾರ್ಪೋರೇಷನ್ ಬ್ಯಾಂಕ್, ಸೌತ್ ಎಂಡ್ ರಸ್ತೆ, ಶೇಷಾದ್ರಿಪುರಂ, ಮಲ್ಲೇಶ್ವರಂ, ಬೆಂಗಳೂರು.
15. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು
16. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂರಾ ಇಲಾಖೆ(ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5ಪ್ರತಿಗಳು)
17. ರಾಜ್ಯ ಪತ್ರಾಗಾರ ಇಲಾಖೆ(ಬಿಡಿ ಪ್ರತಿ ಶಾಖೆ).
18. ಗ್ರಾ.ಅ.ಪಂ.ರಾಜ್ ಇಲಾಖೆ ಮಾಹಿತಿ ಕೇಂದ್ರ-10ಪ್ರತಿಗಳು.
19. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.